ನೋಡು ಸುಂದ್ರಿಗುಳ್ ಸವಾರಿ.. ತಾಂಬಾ ಬಿಸಿ ಬಿಸಿ ಒಗ್ಗಣ್ಣೆ ಮೆಣ್ಸೆನ್ಕಾಯಿ' ಎಂದು ಪ್ರಕಟಿಸಿದ. ತಿಂದ ಮೇಲೆ ದುಡ್ಡನ್ನು ಆಶೀರ್ವಾದ ಮಾಡಿ ಕೊಟ್ಟ ರಾಧಾ ಸುಕನ್ಯಾ ಹಳೇ ಕಾಲೇಜು ಗ್ರೌಂಡಿನ ಹಿಂದಿನ ಒಳದಾರಿ ಹಿಡಿದರು.

'ಬಾ ಜಲ್ದಿ ಬಾ' ಎಂದು ಸುಕನ್ಯಾಳನ್ನು ಕರೆದುಕೊಂಡು ಬಂದ ರಾಧಾ, 'ಶ್ರೀ ರಾಜರಾಜೇಶ್ವರಿ' ಟಾಕೀಸಿನ ಮುಂದೆ ನಿಂತಳು. 'ಸ್ಪೆಕ್ಟ್ರಾ ಜೇಮ್ಸು ಬಾಂಡ್ 007' ಎಂದು ಕನ್ನಡದಲ್ಲಿ ಬರೆದುಕೊಂಡ ತೆಲುಗಿಗೆ ಡಬ್ ಆಗಿರುವ ಸಿನಿಮಾದ ಪೋಸ್ಟರನ್ನು ಓದಿದ ರಾಧಾ ಸುಕನ್ಯಾಳ ಮುಖ ನೋಡಿ ಹುಬ್ಬಾರಿಸಿದಳು. ಸುಕನ್ಯಾ 'ಆಯ್ತು ನಡೀ' ಎಂಬಂತೆ ತಲೆಯಾಡಿಸಿದಳು. ಟೈಮ್ ನೋಡಿಕೊಂಡರು ಸರಿಯಾಗಿ ಎರಡು ಗಂಟೆಯಾಗಿತ್ತು. ಓಡಿ ಬಂದು ಗೇಟು ತೆಗೆದ ಹುಡುಗನಿಗೆ ಸುಕನ್ಯಾ, 'ಏಯ್ ಸುನೀಲಾ... ಹೆಂಗೈತೆ ಸಿನ್ಮಾ?' ಎಂದಾಗ ಅವನಿಂದ 'ನೀವ್ ಬಂದ್ರಲ್ಲಾ ಇನ್ಮಾಲೆ ಚೆನ್ನಾಗಿರ್ತಾತೆ' ಎಂಬ ಉತ್ತರ ಬಂತು. ಕಾಕತಾಳೀಯವೆಂಬಂತೆ ಅರ್ಧಗಂಟೆಯಲ್ಲಿ ಹಿಂದಿನ ಶೋಗಿಂತ ಹೆಚ್ಚು ಜನ ತುಂಬಿಕೊಂಡರು.

ಪರದೆಯ ಮೇಲೆ ಸಿಂಹವೊಂದು ಬಂದು ಘರ್ಜನೆ ಮಾಡಿ ಹೋಯಿತು. ಹಿನ್ನಲೆಯಲ್ಲಿ 'ಡನ್ ಡಾಂಡ ಡನ್ ಡಾಂಡ... ಡನ್ ಡಾಂಡ ಡನ್ ಡಾಂಡ...' ಎಂಬ ಸಂಗೀತ ಶುರುವಾಗಿ 'ಡಡಂಡಾ...ನ್ ಡಾಡಡವ್' ಎಂದು ಮುಗಿಯುವುದರೊಳಗೆ ಯಾರೋ ಒಬ್ಬ ಕತ್ತಲಲ್ಲಿ ನಡೆದು ಬಂದು ಜನರೆಡೆಗೆ ಪಿಸ್ತೂಲಿನಲ್ಲಿ ಶೂಟ್ ಮಾಡಿದ ಪರದೆಯೆಲ್ಲಾ ಕೆಂಪಾಯಿತು. ರೋಚಕ ಹೊಡೆದಾಟ ಬಡಿದಾಟ ಚೇಸುಗಳನ್ನು ನೋಡಿ ರಾಧಾ ಖುಷಿಯಾಗಿ ಹೋದಳು. ಸುಕನ್ಯಾಳಿಗೂ ಸಿನಿಮಾ ಹಿಡಿಸಿತು.

## 7

ಬಾಂಡು ಮುಗಿಸಿಕೊಂಡು ಹೊರಗಡೆ ಬಂದಾಗ ಬಿಸಿಲು ಇಳಿದಿತ್ತು. ಇಬ್ಬರೂ ಪಕ್ಕದಲ್ಲೇ ಇದ್ದ ಪಾನ್ ಅಂಗಡಿಗೆ ಬಂದರು. 'ಮೊಬೈಲಿಗೆ ಏನಾಗೈತೆ ಅಂತ ತೋರಿಸ್ಕೆಂಡ್ ಬರ್ತೀನಿ' ಎಂದು ಸುಕನ್ಯಾ ರಾಧಾಳನ್ನು ಅಲ್ಲೇ ಬಿಟ್ಟು ನಾಲ್ಕು ಶಾಪುಗಳ ಪಕ್ಕದಲ್ಲಿದ್ದ ಮೊಬೈಲ್ ಅಂಗಡಿಗೆ ಹೋದಳು. 'ಸ್ವೀಟ್ ಪಾನ್, ಎರಡು' ಎಂದು ಅಂಗಡಿಯವನಿಗೆ ಆರ್ಡರ್ ಕೊಟ್ಟ ರಾಧಾ, ಅಂಗಡಿಗೆ ಅಂಟಿಕೊಂಡೇ ಇದ್ದ ಕಾಯಿನ್ ಬೂತಿನ ಕಡೆ ನೋಡಿದಳು.

ಹುಡುಗನೊಬ್ಬ ಮಾತನಾಡುತ್ತಾ ನಾಚಿಕೊಳ್ಳುತ್ತಿದ್ದ. ರಾಧಾ ಕಾಯಿನ್ ಬಾಕ್ಸಿಗೆ ಹತ್ತಿರಕ್ಕೆ ವೈಯ್ಯಾರದಿಂದ ಬಂದು, 'ಹ್ಞೂಂ... ಕೊಡು' ಎಂದು ಚಪ್ಪಾಳೆ ತಟ್ಟಿದಳು. ಫೋನು ಹಿಡಿದ ಹುಡುಗ 'ಇಲ್ಲ' ಎಂದು ಸನ್ನೆ ಮಾಡಿದ. ರಾಧಾ, 'ಮ್ಯಾಲಿನ್ ಜೋಬಿನ್ಯಾಗ ಇರ್ತಾತೆ ತಗೀ' ಎಂದಳು, ಹುಡುಗ ಫೋನು ಮುಚ್ಚಿ 'ಇಲ್ಲ' ಅಂದ. ಇವಳು 'ಪರ್ಸಿನ್ಯಾಗ ಇರ್ತಾತೆ ನೋಡು' ಎಂದಳು, ಅವನು 'ಇಲ್ಲ' ಎಂದನು. 'ಬ್ಯಾಗಿನ್ಯಾಗ ಇಟ್ಟಿರ್ತೀ ತಗೀ' ಎಂದು ಇವಳು ಹುಬ್ಬು ಗಂಟಿಕ್ಕಿ 'ಇಲ್ಲ' ಎಂದು ತಾಳ್ಮೆಯನ್ನು ಕಳೆದುಕೊಂಡ ಅವನು. ಮರುಕ್ಷಣವೇ ರಾಧಾ ಟಪಕ್ಕನೆ ಹುಡುಗನ ಮರ್ಮಾಂಗಕ್ಕೆ ಮೆಲ್ಲಗೆ ಬಡಿದು 'ಇಲ್ಲಿ?' ಎಂದಳು. ಏಟಿಗೆ ಕಕ್ಕಾಬಿಕ್ಕಿಯಾದ ಹುಡುಗನೂ ಇನ್ನೂ ಟಪಕ್ಕನೇ 'ಇಲ್ಲ' ಎಂದುಬಿಟ್ಟ. 'ನಗಲೇ?' ಎಂಬಂತಿದ್ದ ರಾಧಾಳ ಮುಖ ನೋಡಿ 'ಥೋ' ಎಂದುಕೊಂಡ ಹುಡುಗನಿಗೆ ಭಯಂಕರ ನಾಚಿಕೆಯಾಯಿತು. ಇಷ್ಟಲ್ಲದೇ ಯಾವಾಗಲೋ ಬಂದು ನಿಂತಿದ್ದ ಸುಕನ್ಯಾಳ ಜೊತೆಗೆ ಅಂಗಡಿಯವನೂ ಜೋರು ನಗಲತ್ತಿದ್ದನ್ನು ಕಂಡು ಕೆಕ್ಕರಿಸಿ ಫೋನನ್ನು ಇಟ್ಟ ಹುಡುಗ ಅಲ್ಲಿಂದ ದಡ ದಡ ಹೊರಟ. ರಾತ್ರಿಗೆ ಬೇಕಾದ ದಿನಸಿ ತರಲು ಇಬ್ಬರೂ ಮಾರ್ಕೆಟ್ಟು ರೋಡು ಹಿಡಿದರು.